ಆಗುವುದು ಸರಿಯಲ್ಲ, ಯಾವ ರೀತಿಯಾಗಿ ನಡೆಯಿತು, ಯಾವ ರೀತಿಯಾಗಿ ನಡೆದಿಲ್ಲ ಎನ್ನುವುದು ನಾನು ನೋಡಿದ್ದೇನೆ ಇದು ಸರಿಯಾಗುವುದಿಲ್ಲ

ಅಧ್ಯಕ್ಷರು – ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ, ಇದು ಮುಗಿಯಲಿ ಅನಂತರ ತೆಗೆದುಕೊಳ್ಳೋಣವೆಂದು ಹೇಳಿದೆ preliminary submission ಮಾಡುವುದಾಗಿ ಹೇಳುತ್ತಾರೆ

5 ನಿಲುವಳಿ ಸೂಚನೆ ಅನುಮತಿ ಕೋರಿ ಚರ್ಚೆ

ವಿಷಯ ಬೆಂಗಳೂರು ನಗರದಲ್ಲಿ ನಡೆದ ಕೋಮು ಗಲಭೆ ಬಗ್ಗೆ

ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು) – ಇತ್ತೀಚಿನ ದಿವಸಗಳಲ್ಲಿ ಬೆಂಗಳೂರು ನಗರದಲ್ಲಿ ಕೋಮು ಗಲಭೆಗಳಾಗಿವೆ, ಇದು ಯಾರಿಗಾದರೂ ಸಹ ಶೋಭೆ ತರತಕ್ಕಂಥದ್ದು ಅಲ್ಲ ನಾವಾಗಲಿ, ಖರ್ಗೆಯವರು, ರೋಷನ್‌ಬೇಗ್, ಸಿದ್ಧರಾಮಯ್ಯನವರು ಎಲ್ಲರೂ ಕೂಡಿ ಆಸ್ಪತ್ರೆಗೆ ಹೋಗಿ ನೋಡಿದ್ದೇವೆ ಅದರ ಬಗ್ಗೆ ಕೂಡ ನಾವು Adjournment motion ತರಬೇಕೆಂದು ವಿಚಾರ ಮಾಡಿದ್ದೆವು ಆದರೆ ಇಡೀ ರಾಜ್ಯದ ರೈತರಿಗೆ, ಜನತೆಗೆ ಸಂಬಂಧಪಟ್ಟಂತಹ ಬರ ಪರಿಸ್ಥಿತಿ ಚರ್ಚೆ ಮಾಡಬೇಕೆಂದು ನಾವು ಸಹ ಹೇಳಿದ್ದೇವೆ ನಿನ್ನೆಯೂ ಸಹ ಅದರ ಬಗ್ಗೆ ಚರ್ಚೆಯಲ್ಲಿ ನಾವೆಲ್ಲಾ ಭಾಗವಹಿಸಿದ್ದೇವೆ ಇವತ್ತು ಮಲ್ಲಿಕಾರ್ಜುನ್ ಖರ್ಗೆಯವರು, ಸಿದ್ಧರಾಮಯ್ಯನವರು ಅದರ ಬಗ್ಗೆ ಮಾತನಾಡಲಿದ್ದಾರೆ ನೀವು ಅವಕಾಶ ಕೊಡಬಾರದೆಂದಲ್ಲ, ನಾವು ಕೂಡ ಆ ವಿಷಯದ ಬಗ್ಗೆ ಮಾತನಾಡುತ್ತೇವೆ ಇವತ್ತು ಶ್ರೀರಾಮರೆಡ್ಡಿಯವರು ಹಾಗು ಇತರ ಸದಸ್ಯರು ತರತಕ್ಕಂಥ ನಾಗರಾಜ್‌ರವರ notice ಗೆ ನಾವು ಸಮ್ಮತಿಸುತ್ತೇವೆ, ಆದರೆ ಈ ವಿಷಯದ ಬಗ್ಗೆ ಚರ್ಚೆ ಮುಕ್ತಾಯವಾಗಲಿ, ಇನ್ನೂ ಹದಿನೈದು ದಿವಸಗಳ ಕಾಲ ಸದನದ ಕಾರ್ಯಕಲಾಪ ನಡೆಯುತ್ತದೆ ಹಾಗಾಗಿ ಆ ವಿಷಯದ ಬಗ್ಗೆ ಕೂಡ ಚರ್ಚೆ ಮಾಡೋಣ ಇವತ್ತು ಬರ ಪರಿಸ್ಥಿತಿ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟು ಮತ್ತೆ ಸೋಮವಾರದ ದಿವಸ ಅಧಿವೇಶನ ಸೇರಿದಾಗ ಕೋಮು ಗಲಭೆ ಬಗ್ಗೆ ಕೂಡ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಾಗ ಎಲ್ಲಾ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದಂತೆ ಆಗುತ್ತದೆ ಆಗ ರಾಜ್ಯದ ಜನತೆ ಕೂಡ ಸಂತೋಷಪಡುತ್ತಾರೆ ಶ್ರೀರಾಮರೆಡ್ಡಿಯವರು ತರತಕ್ಕಂಥ ನಿಲುವಳಿ ಸೂಚನೆ ಬಗ್ಗೆ ನಮ್ಮ ಅಭ್ಯಂತರವಿಲ್ಲ ಆದರೂ ಈ ವಿಷಯ ಕೂಡ

ಮುಖ್ಯವಾದ ವಿಷಯವಾಗಿದೆ ಅದರಲ್ಲಿ ನಾವು ಕೂಡ ಭಾಗವಹಿಸುತ್ತೇವೆ ಈಗ ಮಾಧುಸ್ವಾಮಿಯವರು ಚರ್ಚೆಯನ್ನು ಪ್ರಾರಂಭ ಮಾಡಲಿ, ಅದಕ್ಕೆ ನಮ್ಮ ರಾಜ್ಯದ ಹಿರಿಯ ಸದಸ್ಯರಾದಂಥ ಮಲ್ಲಿಕಾರ್ಜುನ್ ಖರ್ಗೆ ಹಾಗು ಸಿದ್ಧರಾಮಯ್ಯನವರು ಮಾತನಾಡುತ್ತಾರೆ, ಅದಕ್ಕೆ ತಾವು ಅನುವು ಮಾಡಿಕೊಡಬೇಕು

ಶ್ರೀ ಆರ್ ರೋಷನ್‌ಬೇಗ್ – ಸಭಾಧ್ಯಕ್ಷರೇ, ಈ ವಿಷಯದ ಬಗ್ಗೆ ನಮ್ಮ ನಾಯಕರು ಏನು ಹೇಳಿದ್ದಾರೆ, ಬೆಂಗಳೂರು ನಗರದಲ್ಲಿ ನನ್ನ ಕ್ಷೇತ್ರದಲ್ಲಿ ಕೋಮು ಗಲಭೆ ನಡೆದಿದೆ ಅದರ ಬಗ್ಗೆ ನಾವೂ ಕೂಡ ಮಾತನಾಡಬೇಕು ಮಾಧುಸ್ವಾಮಿಯವರು ನಿನ್ನೆಯ ಬರದ ಬಗ್ಗೆ ಭಾಷಣವನ್ನು ಮುಂದುವರೆಸಲಿ, ಆ ನಂತರ ಈ ವಿಷಯದ ಬಗ್ಗೆ ನಾವೆಲ್ಲಾ ಮಾತನಾಡಬೇಕಾಗುತ್ತದೆ, ನನ್ನ ಕ್ಷೇತ್ರದಲ್ಲಿಯೇ ಆ ಕೋಮು ಗಲಭೆ ನಡೆದಿರುವುದು ನಮ್ಮ ವಿರೋಧ ಪಕ್ಷದ ನಾಯಕರು, ಖರ್ಗೆಯವರು ನಾವೆಲ್ಲಾ ಆಸ್ಪತ್ರೆಗಳಿಗೆ ಹೋಗಿ ಎರಡು ಮೂರು ದಿವಸ ಮಾನಿಟರ್ ಮಾಡಿದ್ದೇವೆ ಹಾಗಾಗಿ ಆ ಬಗ್ಗೆ ನಾವು ಕೂಡ ಮಾತನಾಡುವವರಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ನಾವು ನಿಯಮದ ಕೆಳಗೆ ಇದೊಂದು ಜರೂರು ವಿಷಯ, ಈ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದು notice ಕೊಟ್ಟಿದ್ದೇವೆ ತಾವು ರೂಲಿಂಗ್ ಕೊಡಿ, ನಾವು Adjournment motion ಕೊಟ್ಟಿರುವುದರಿಂದ ಇದಾದ ಮೇಲೆ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ರೂಲಿಂಗ್ ಕೊಡಿ ಇದು ನಮಗೆ ಸಂಬಂಧವಿಲ್ಲ, ತಾವು ಹೇಗೆ ಹೇಳುತ್ತೀರೋ ನಮಗೆ ಗೊತ್ತಿಲ್ಲ ನಾವು ಒಂದು Adjournment motion ಅನ್ನು ನಿನ್ನೆ ಮಾಡೋಣ ಎಂದಿದ್ದೆವು, ಅವರ ವಿಷಯ ಬಂದಿದ್ದಕ್ಕೆ ನಾವು ಸುಮ್ಮನಿದ್ದೆವು ರೂಲ್ 69 ಗೆ ನೀವು ಕನ್ವರ್ಟ್ ಮಾಡಿದಾಗ ನಾವು Adjournment motion ಕೊಟ್ಟಿದ್ದೇವೆ Adjournment motion ಚರ್ಚೆಯಲ್ಲಿದ್ದರೆ ನಾವು ಖಂಡಿತ ಕೊಡುತ್ತಿರಲಿಲ್ಲ ನಿಯಮ 69 ಇದ್ದಾಗ ನಾವು notice ಕೊಡಬಾರದೆಂದು ಯಾವುದೇ ನಿಯಮದಲ್ಲಿಲ್ಲವಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ – ನಾನು ಮಾಧುಸ್ವಾಮಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಬೆಳಗಾವಿಯಲ್ಲಿ ಅಧಿವೇಶನ ಮುಗಿದ ಮೇಲೆ

ನಿನ್ನೆಯೇ ನಾವು ಕಾರ್ಯಕಲಾಪವನ್ನು ಪ್ರಾರಂಭ ಮಾಡಿದ್ದೇವೆ ನಿನ್ನೆ ಮಾತನಾಡುವಾಗಲೂ ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದೇವೆ ಅನೇಕ ಸಾರ್ವಜನಿಕ ಮಹತ್ವದ ವಿಷಯಗಳಿದ್ದರೂ ಸಹ ಬರಗಾಲದ ಚರ್ಚೆ ಬಹಳ ಪ್ರಾಮುಖ್ಯವಾದುದು ಎಂದು ನಿರ್ಣಯ ಮಾಡಿ ನಾವು ನೋಟಿಸ್ ಕೊಟ್ಟಿದ್ದೇವೆ ತಾವು ಅದನ್ನು ಯಾವಾಗ ನಿಯಮ 69ಕ್ಕೆ ಕನ್ವರ್ಟ್ ಮಾಡಿದಿರಿ, ಈ ಸದನದಲ್ಲಿ ಎಷ್ಟೇ ತೀವ್ರವಾಗಿ ನಾವು ವಾದ ಮಾಡಿದರೂ ಸಹ ರೂಲ್ 60 ಕೆಳಗೆ ನೀವು ಅನುಮತಿ ಕೊಡುವುದಿಲ್ಲ They are party to it Discussions ನಲ್ಲಿ ಭಾಗವಹಿಸುತ್ತಿದ್ದಾರೆ ನಾವು ತಾಂತ್ರಿಕವಾಗಿ, ನಿನ್ನೆ ತಾವು ಆ ನಿಯಮವನ್ನು ಕ್ಲೋಸ್ ಮಾಡಿ ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದರಿಂದ ನಾವು ಇವತ್ತು notice ಕೊಡುತ್ತೇವೆಂದು ಹೇಳಿ ಮುಂದುವರೆಸುವುದಾದರೆ ಆಗಬಹುದು It will not be a good precedent ಇಂತಹ ಅನೇಕ ಘಟನೆಗಳು ಇವೆ, according to our Rules, Rule 60 ಕೆಳಗೆ ನಾವು ಒಂದು ದಿವಸಕ್ಕೆ ಒಂದೇ notice ಕೊಡಲಿಕ್ಕೆ ಬರುವುದು ಅಥವಾ ಹಲವಾರು notice ಇದ್ದರೆ ಯಾವುದು ಮೊದಲು ಬರುತ್ತದೆ, ಅದನ್ನು ತಾವು ನಿರ್ಣಯ ಮಾಡುತ್ತೀರಿ, ಇದು ಸಾರ್ವಜನಿಕವಾಗಿ ಅಷ್ಟೇ ಮಹತ್ವವಾದ ವಿಷಯವಾದರೂ ಕೂಡ ಬರಗಾಲ ಇಡೀ ರಾಜ್ಯಕ್ಕೆ ಸಂಬಂಧಿಸಿದ ವಿಷಯವೆಂದು ನಾವು notice ಕೊಟ್ಟಿದ್ದೇವೆ ತಾಂತ್ರಿಕತೆ ಮೇಲೆ ತಾವು ನಿರ್ಣಯ ಕೈಗೊಳ್ಳುವುದಾದರೆ ನಮ್ಮದೇನೂ ಆಕ್ಷೇಪಣೆಯಿಲ್ಲ ಮಾನ್ಯ ಖರ್ಗೆಯವರು ಹೇಳಿದಂತೆ ಎಲ್ಲಾ ವಿಷಯಗಳಿಗೂ ಹಾಗೆಯೇ ಹೋಗಬೇಕಾಗುತ್ತದೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ನಿಮ್ಮಷ್ಟೇ ಕಾಳಜಿ ನಮಗೂ ಕೂಡ ಆ ವಿಷಯದಲ್ಲಿದೆ ಬರಗಾಲದ ವಿಷಯದಲ್ಲಿ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಿದ್ದೀರಿ ಬರಗಾಲದ ವಿಷಯವನ್ನು ಚರ್ಚೆ ಮಾಡಿ ಒಂದು ಸ್ಥಿತಿಗೆ ತೆಗೆದುಕೊಂಡು ಬರೋಣ ಒಂದು conclusion ಮಾಡೋಣ ಸರ್ಕಾರ ಏನು ಉತ್ತರ ಕೊಡುತ್ತದೆ ನೋಡೋಣ, ಅದರ ನಂತರ ನಾವು ಕೂಡ ಆ ವಿಷಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುತ್ತೇವೆ Otherwise ತಾವು permission ಕೊಡುವುದಾದರೆ they can go ahead.

ಶ್ರೀ ಜೆ ಸಿ ಮಾಧುಸ್ವಾಮಿ – ರಮೇಶ್‌ಕುಮಾರ್‌ರವರು ಸ್ಪೀಕರ್ ಆಗಿದ್ದವರು ನಾವು ನಿನ್ನೆ ದಿವಸ ಯಾತಕ್ಕೆ ಕೊಡಲಿಕ್ಕೆ ಬರಲಿಲ್ಲವೆಂದರೆ ನಿಮ್ಮ ಆಫೀಸಿನಲ್ಲಿ there was an Adjournment motion, Rule 69 ಕ್ಕೆ ತಾವು convert ಮಾಡಿದ ಮೇಲೆ ಕಾನೂನಿನ ಪ್ರಕಾರ ಇನ್ನೊಂದು Adjournment motion ಕೊಡಲಿಕ್ಕೆ ಅಡಚಣೆ ಇಲ್ಲವೆಂದು ನಾವು ಸಹ ಕೊಟ್ಟಿದ್ದೇವೆ ಅವರೂ party ಆಗಬಾರದು, ಇದರಲ್ಲಿ ಭಾಗವಹಿಸಬಾರದೆನ್ನುವ ಯಾವ ಭಾವನೆಯೂ ನಮಗಿಲ್ಲ ನಾವೇನು ಬೇರೆ motive ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ ನಾವು ಕೊಡಬೇಕಾದುದ್ದನ್ನು ಕೊಟ್ಟಿದ್ದೇವೆ ನಾವು ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಕೇಳಿದ್ದಾದ ನಂತರವೇ ಅದನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ ನಾವೇನು ಬೇಡವೆನ್ನುವುದಿಲ್ಲ

ಶ್ರೀ ಧರಂಸಿಂಗ್ – ನಾನು ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಏತಕ್ಕೆ ತಾವು ತಾಂತ್ರಿಕವಾಗಿ interpretation ಮಾಡುತ್ತಿದ್ದೀರಿ? ಬರದ ಬಗ್ಗೆ ಚರ್ಚೆಯಾಗಲಿ, ಈಗ ನಿಮಗೆ Adjournment motion ನಲ್ಲಿ ಪ್ರಿಲಿಮನರಿ ಸಬ್‌ಮಿಷನ್ ಮಾಡಲಿಕ್ಕೆ ಅವಕಾಶ ಕೊಟ್ಟರೆ ಬರದ ಚರ್ಚೆ gets diluted, ಇವತ್ತು ತಾವು 2 00ಗಂಟೆಗೆ ಇವತ್ತಿನ ಸದನವನ್ನು ಮುಗಿಸುತ್ತಿದ್ದೀರಿ ಅಥವಾ 4 00 ಗಂಟೆಗೆ ಸದನವನ್ನು ಮುಕ್ತಾಯಗೊಳಿಸುತ್ತೀರೆಂದು ತಿಳಿಯೋಣ ಇನ್ನು ಬರದ ಮೇಲೆ ಚರ್ಚೆ ನಡೆಯುತ್ತಿದೆ, ಆ ಚರ್ಚೆಗೆ ಏನೊ ಒಂದು ರೀತಿಯಲ್ಲಿ ಚರ್ಚೆಗೆ ಅಡ್ಡ ಹಾಕುವಂತಹದ್ದು ಸರಿ ಅಲ್ಲ ಹಾಗೇಕೆ ನೀವು ಮಾಡುತ್ತಿದ್ದೀರಿ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ನಾವು ಆ ಭಾವನೆಯಲ್ಲಿ notice ಅನ್ನು ಕೊಟ್ಟಿಲ್ಲ

ಅಧ್ಯಕ್ಷರು – ಈಗ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಮಾತನಾಡುತ್ತಾರೆ ಕೇಳಿ

ಶ್ರೀ ಜೆ ಎ ಶ್ರೀರಾಮರೆಡ್ಡಿ – ನಮಗೆ ಎರಡು ನಿಮಿಷ ಸಮಯ ಕೊಡಿ, ಅದನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟು ನೀವು ಮತ್ತೆ ಏನಾದರೂ ತೀರ್ಪನ್ನು ಕೊಡಿ

ಶ್ರೀ ಎಂ ಪಿ ಪ್ರಕಾಶ್ – ಈಗ ನಾನು ಒಂದು ಸಲಹೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ, ಈ ನಿಲುವಳಿ ಸೂಚನೆಯನ್ನು ಕೊಡುವಂಥ ತಮ್ಮ ಅಧಿಕಾರವನ್ನು ಅವರೂ ಕೂಡ ಪ್ರಶ್ನಿಸಿಲ್ಲ ತಾಂತ್ರಿಕವಾಗಿ ಸರಿಯಾದಂಥ ರೀತಿಯಲ್ಲಿಯೇ ಇದೆ, ಆ ನಿಲುವಳಿ ಸೂಚನೆಯನ್ನು ನೀವು ಮಂಡಿಸಿ ಅವರ ಮನವೊಲಿಸತಕ್ಕಂಥ ಪ್ರಯತ್ನದಲ್ಲಿ, ಅದನ್ನು ವಿರೋಧ ಮಾಡಲಿಕ್ಕೂ ನಾವು ತಯಾರಿದ್ದೇವೆಂದು ಇಂಥದ್ದನ್ನು ಮಾಡಬಾರದೆಂದು ಸಹ ನಾವು ಹೇಳುತ್ತೇವೆ ಅದಾದ ಮೇಲೆ ಅವರು ನಿಲುವು ತೆಗೆದುಕೊಳ್ಳುತ್ತಾರೆ ಆದರೆ ಈ ಹಿನ್ನೆಲೆಯಲ್ಲಿ ಹಿರಿಯರೆಲ್ಲರೂ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ನನ್ನದೊಂದು ಸಲಹೆ ಏನೆಂದರೆ ತಾವು ನಿಯಮ 69 ರ ಕೆಳಗೆ notice ಅನ್ನು ಕೊಟ್ಟರೆ ಎಲ್ಲರೂ ಕೂಡ ಭಾಗವಹಿಸಬಹುದು ಈಗ ನೀವು Adjournment motion ಕೊಟ್ಟಿರುವುದರಿಂದ ಈಗ ರೋಷನ್ ಬೇಗ್, ರಮೇಶ್‌ಕುಮಾರ್‌ರವರಾಗಲಿ, ನಮ್ಮ ಭಾಗದಲ್ಲಿ ಇರತಕ್ಕಂಥ ಹಿರಿಯರು ಸಹ ಭಾಗವಹಿಸಲಿಕ್ಕೆ ಆಗುವುದಿಲ್ಲ ಆದ್ದರಿಂದ ತಾವು ದಯವಿಟ್ಟು ಈ ಹಿನ್ನೆಲೆಯಲ್ಲಿ ನಿಲುಮ 69 ರ ಕೆಳಗೆ ತಾವು notice ಕೊಡಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – ನಾವು ಈಗಲೇ ತೆಗೆದುಕೊಳ್ಳಬೇಕೆಂದು ನಾವು ಕೇಳಿಲ್ಲ ಸರ್, ಮೂವ್ ಮಾಡಿದೆ ಎಂದು ಹೇಳಲಿ

ಶ್ರೀ ವಾಟಾಳ್ ನಾಗರಾಜ್ – ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ, ಮಾನ್ಯ ಅಧ್ಯಕ್ಷರು ಇದನ್ನು ಯಾವಾಗ ತೆಗೆದುಕೊಳ್ಳಬೇಕೆಂದಿದ್ದಾರೋ ಆಗಲೇ ತೆಗೆದುಕೊಳ್ಳಲಿ

ಶ್ರೀ ಎಂ ಪಿ ಪ್ರಕಾಶ್ – ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಅದನ್ನೇ ಅವರು ನಿಯಮ 69 ರ ಕೆಳಗೆ ನೋಟಿಸ್ ಕೊಡಲಿ, Non precedency ಬಿಡಿ, ನಿಯಮ 69 ರ ಕೆಳಗೆ ನೋಟಿಸ್ ಕೊಟ್ಟುಬಿಡಿ ಸರಿಹೋಗುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಆಯಿತು, ಅವರು ನಿಯಮ 69 ಕ್ಕೆ ರೂಲಿಂಗ್ ಕೊಡಲಿ

ಶ್ರೀ ವಾಟಾಳ್ ನಾಗರಾಜ್ – ಅಧ್ಯಕ್ಷರೇ, ನೀವು ಬರಗಾಲದ ಚರ್ಚೆ ಮುಗಿದ ನಂತರ ನಿಯಮ 69 ರ ಕೆಳಗೆ ತೆಗೆದುಕೊಳ್ಳುತ್ತೇವೆಂದು ಹೇಳಿ ನಮ್ಮದೇನೂ ಅಭ್ಯಂತರವಿಲ್ಲ ನಮ್ಮದೇನೂ ಪರವಿಲ್ಲ

ಅಧ್ಯಕ್ಷರು – ಇದು ಮುಗಿದ ಮೇಲೆ I will take up that

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ವಿರೋಧಪಕ್ಷದ ನಾಯಕರು ನಮ್ಮನ್ನು ಕರೆದು ಮಾತನಾಡಬೇಕು ಎಲ್ಲಿ ನೀವು ನಮ್ಮನ್ನು ಕರೆಯುವುದಿಲ್ಲ, ನಾವೇನು ವಿರೋಧಪಕ್ಷದವರಲ್ಲವೇ? ಏಕೆ ನಮ್ಮನ್ನು ಕರೆಯುವುದಿಲ್ಲ ?

ಅಧ್ಯಕ್ಷರು – ಆಯಿತು, ಈಗ ಈ ವಿಷಯವನ್ನು ಮುಂದುವರೆಸಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅಧ್ಯಕ್ಷರೇ, ಈಗ ರೂಲ್ 69 ಆದರೆ ಅದನ್ನು ನಾನು ಸಬ್ಮಿಟ್ ಮಾಡುತ್ತೇನೆ

ಅಧ್ಯಕ್ಷರು – ಈಗ 69 ರ ಮೇಲೆ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದೆ ಆ ಚರ್ಚೆ ಮುಗಿದ ಮೇಲೆ I will take up Adjournment motion ಎಂದು ಹೇಳಿದೆ ಅದಾದ ನಂತರ ನೀವು ಪಿಲಿಮನರಿ ಸಬ್‌ಮಿಷನ್ ಮಾಡಿದ ಮೇಲೆ ನಿಯಮ 69 ಅನ್ನೋದನ್ನು ನಿರ್ಧರಿಸೋಣ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಇಲ್ಲ, ನೀವು ರೂಲಿಂಗ್ ಕೊಟ್ಟರೆ ನಾವು ಅದಕ್ಕೆ ಒಪ್ಪಿಕೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ – ಬರಗಾಲದ ಮೇಲೆ ಚರ್ಚೆ ತೆಗೆದುಕೊಳ್ಳಲಿ, ನಮ್ಮದೇನೂ ಅಭ್ಯಂತರವಿಲ್ಲ, ನಿಯಮ 69 ರ ಕೆಳಗೆ ತೆಗೆದುಕೊಳ್ಳಲಿ, ಅದರ ಬಗ್ಗೆ ತೀರ್ಮ ಕೊಡಿ

ಅಧ್ಯಕ್ಷರು – ಇದಕ್ಕೆ ಸರ್ಕಾರ ಏನು ಹೇಳುತ್ತದೆ, ಅವರೇನು ಹೇಳುತ್ತಾರೆಂದರೆ ಕೋಮು ಗಲಭೆ ನೋಟಿಸ್ ಅನ್ನು ನಿಯಮ 69 ರ ಕೆಳಗೆ ಕೊಡಬೇಕೆಂದು ಹೇಳುತ್ತಾರೆ

ಶ್ರೀ ಎಂ ಪಿ ಪ್ರಕಾಶ್ – ನಾನು ಆಗಲೇ ಸಲಹೆ ಮಾಡಿದೆ ಈಗ ಎಲ್ಲಾ ಹಿರಿಯರು ಮಹತ್ವವಾದ ಬರಗಾಲದ ವಿಷಯದ ಮೇಲೆ ಚರ್ಚೆ ಮಾಡುತ್ತಿದ್ದಾರೆ, ಅದಕ್ಕೆ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಿದ್ದಾರೆ ತಾಂತ್ರಿಕವಾಗಿ ಅವರು ಕೊಟ್ಟಿರತಕ್ಕಂಥ ನಿಲುವಳಿ ಸೂಚನೆ ಏನಿದೆ, ಅದರ ಬಗ್ಗೆ ತಮ್ಮ ಮನವನ್ನೊಲಿಸಬೇಕಾಗುತ್ತದೆ, ಆ ಸಂದರ್ಭದಲ್ಲಿ ಅದನ್ನು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲವೆನ್ನುವುದಕ್ಕೆ ಬೇಕಾದಷ್ಟು ರೂಲಿಂಗ್ಸ್ ಇವೆ ಅದನ್ನು ನಾವು ವಿರೋಧ ಮಾಡುತ್ತಿರುತ್ತೇವೆ ಈ ಸನ್ನಿವೇಶದಲ್ಲಿ ನಾನೊಂದು ಸಲಹೆಯನ್ನು ತಮ್ಮ ಅಪ್ಪಣೆ ಪಡೆದು ಕೇಳಿದೆ ದಯವಿಟ್ಟು

ತಾವೆಲ್ಲರೂ ಚರ್ಚೆಯಲ್ಲಿ ಭಾಗವಹಿಸಬೇಕೆನ್ನುವ ಕಾರಣಕ್ಕಾಗಿಯೇ, ತಾವು ಕೋಮು ಗಲಭೆ ವಿಚಾರವನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿಕೊಂಡು, ಈಗ 69 ರ ನಿಯಮದಡಿ ಇರುವ ನಿಲುವಳಿ ಸೂಚನೆಯ ಬರಗಾಲದ ವಿಷಯ ಚರ್ಚೆಯಾದ ನಂತರ, ಮತ್ತೆ ನಿಯಮ 69 ರ ಕೆಳಗೆ ಆ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ನಮ್ಮದೇನೂ ಆಕ್ಷೇಪಣೆಯಿಲ್ಲವೆನ್ನುವ ಮಾತನ್ನು ಅವರು ಹೇಳಿರುವುದರಿಂದ ಸರ್ಕಾರ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ತಯಾರಿದೆ, ಹಾಗಾಗಿ ತಾವು ಅದನ್ನು ನಿಯಮ 69 ಕ್ಕೆ ಪರಿವರ್ತನೆ ಮಾಡಬೇಕೆಂದು ಕೋರುತ್ತೇನೆ

ಅಧ್ಯಕ್ಷರು – ಆಯಿತು, ಈ ಬಗ್ಗೆ ಸರ್ಕಾರದ ಯಾವುದೇ ತಕರಾರು ಇಲ್ಲದಿರುವುದರಿಂದ ಬರಗಾಲದ ಚರ್ಚೆ ಮುಗಿದ ನಂತರ ಆ ವಿಷಯವನ್ನು ತೆಗೆದುಕೊಳ್ಳೋಣ

ಶ್ರೀ ಕೆ ಆರ್ ರಮೇಶ್‌ಕುಮಾರ್ – ಇಲ್ಲಿ ಸ್ವಲ್ಪ ಲೋಪವಾಗಿದೆ ತಾವು ನಿನ್ನೆ ನಮ್ಮ ನಿಲುವಳಿ ಸೂಚನೆಯನ್ನು ಕೊಡುವುದರ ಮೊದಲು ಅವರನ್ನು ನಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು ಎಲ್ಲೋ ಒಂದು ಕಡೆ ನಾವು ಅದನ್ನು ಒಪ್ಪಿಕೊಂಡು ಬಿಟ್ಟರೆ ಮನಸ್ಸಿಗೆ ಹಗುರವಾಗುತ್ತದೆ ನಾವು ನಿನ್ನೆ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ನಿಲುವಳಿ ಸೂಚನೆಯನ್ನು ಕೊಟ್ಟಿದ್ದು ಸ್ವಲ್ಪ ಅವರಿಗೂ ಇರುಸುಮುರುಸು ಆಗಿರುತ್ತದೆ ಹಾಗಾಗಿ ನಾವು ಅವರಲ್ಲಿ ಕೂಡ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇವೆ ಇನ್ನು ಮುಂದೆ ಸಾಧ್ಯವಾದಷ್ಟು ಮಟ್ಟಿಗೆ ಮುಂದಿನ ನಡಾವಳಿಗಳಲ್ಲಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ ಹಾಗಾಗಿ ದಯಮಾಡಿ ತಾವು ಸಹಕರಿಸಬೇಕು

ಶ್ರೀ ಜೆ ಸಿ ಮಾಧುಸ್ವಾಮಿ – ನಾವು honest ಆಗಿ ಹೇಳುತ್ತಿದ್ದೇವೆ, ಆ ಕಾರಣಕ್ಕಾಗಿ ನೋಟಿಸ್ ಕೊಟ್ಟಿಲ್ಲ, ಇವರೇ ಕೊಡಬಹುದು ಎಂದು ನಿನ್ನೆಯೂ ನಾವೆಲ್ಲ ಕಾದಿದ್ದೆವು ನಾವು ವಿರೋಧಪಕ್ಷದಲ್ಲಿ ಕುಳಿತಾಗ ಏನಾದರೊಂದು ಮಾಡಬೇಕಲ್ಲವೇ? ನೀವು ಹೇಗೆ ಕರ್ತವ್ಯ ಮಾಡಬೇಕೋ ನಾವು ಅದೇರೀತಿ ಕರ್ತವ್ಯವನ್ನು ಮಾಡಬೇಕಲ್ಲವೇ? ಆ ರೀತಿ ಮಾಡಿದ್ದೇವೆ

ಶ್ರೀ ಎಂ ಪಿ ಪ್ರಕಾಶ್ – ಅವರೇನು ಹೇಳುತ್ತಿದ್ದಾರೆ ಅದು ನಿಜ, ರಮೇಶ್‌ಕುಮಾರ್‌ರವರು ಆ ವಿಚಾರವನ್ನು ಹಿಡಿದರು ಆದ್ದರಿಂದ ನಿನ್ನೆ

ನಿಲುವಳಿ ಸೂಚನೆಗೆ ಆಕಸ್ಮಾತ್ ತಾವು ಒಪ್ಪಿಗೆ ಕೊಟ್ಟಿದ್ದರೆ ಅವರ್ಯಾರು ಮಾತನಾಡಲಿಕ್ಕೆ ಅವಕಾಶವಿರುತ್ತಿರಲಿಲ್ಲ ನಿಲುವಳಿ ಸೂಚನೆಗೆ ಸಹಿ ಮಾಡಿದವರಿಗೆ ಮಾತ್ರ ಇರುತ್ತಿತ್ತು ಅದಕ್ಕೆ tit for tat ರೀತಿಯಲ್ಲಿ ಭಾರಿ ಜಾಣತನವನ್ನು ಮಾಡಿದ್ದಾರೆ, ಇರಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಆ ವಿಚಾರವೇ ನಮ್ಮಲ್ಲಿ ಇಲ್ಲ, not at all

ಶ್ರೀ ವಾಟಾಳ್ ನಾಗರಾಜ್ – ಅದರ ಬಗ್ಗೆ ನಮ್ಮಲ್ಲಿ ಭೇದಭಾವವೇ ಇಲ್ಲ ಹಾಗಾಗಿ ಆ ಬಗ್ಗೆ ಮಾನ್ಯ ಪ್ರಕಾಶ್‌ರವರು ನಮ್ಮನ್ನು ಬೇರೆ ಮಾಡತಕ್ಕಂಥ ವ್ಯವಸ್ಥೆ ಆಗುವುದು ಬೇಡ

ಅಧ್ಯಕ್ಷರು – ಈಗ ಆಯಿತು ಬಿಡಿ, ಅವೆಲ್ಲಾ ಮುಕ್ತಾಯವಾಯಿತಲ್ಲ, ಈಗ ಯಾರು ಮಾತನಾಡುವವರು ದಯಮಾಡಿ ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಮಾತನಾಡುತ್ತಿದ್ದೆ, 15 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಈಗ ತಮ್ಮ ಭಾಷಣದ ನಂತರ ರಾಜ್ಯಪಾಲರ ವಂದನಾ ನಿರ್ಣಯವನ್ನು ಮೂವ್ ಮಾಡಿಸಿಬಿಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಈಗಲೇ ಮೂವ್ ಮಾಡಿಸಿ ಸರ್, ಆಮೇಲೆ ಮಾತನಾಡುತ್ತೇನೆ

ಅಧ್ಯಕ್ಷರು – ಸರಿ ಈಗಲೇ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯ ಪ್ರಸ್ತಾಪವನ್ನು ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮೂವ್ ಮಾಡುತ್ತಾರೆ, ಆ ನಂತರ ಮಾಧುಸ್ವಾಮಿಯವರು ಮಾತನಾಡಲಿ

6 ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) – ``2007 ರ ಜನವರಿ 25 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ ಎಂದು ಸೂಚಿಸುತ್ತೇನೆ``